ಶ್ರೀ ಎಂ. ರಘುಪತಿ.—ಇದು ೨ ಖಾತೆಗಳಿಗೂ ಸಂಬಂಧಪಟ್ಟ ಪ್ರಶ್ನೆಯಾಗಿರುವುದರಿಂದ ನಾಳೆ ಅದರ ಬಗ್ಗೆ ಉತ್ತರವನ್ನು ಒದಗಿಸಿಕೊಡುವ ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬರವರು ಸಭೆಯಲ್ಲಿ ಹಾಜರಿರಲಿಲ್ಲ.

ಜಮಖಂಡಿಯಲ್ಲಿ ಇಂಗಳಗಾಂವಿ ಎಂಬ ಉಪ ಶಿಕ್ಷಣಾಧಿಕಾರಿಯಿಂದ ಬಡ ಶಿಕ್ಷಕರಿಗೆ ಆಗುತ್ತಿರುವ ಕಿರುಕುಳದ ಬಗ್ಗೆ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.— ಸನ್ಮಾನ್ಯ ಅಧ್ಯಕ್ಷರೇ, ಜಮಖಂಡಿಯಲ್ಲಿ ಇಂಗಳಗಾಂವಿ ಎಂದ ಉಪ ಶಿಕ್ಷಣಾಧಿಕಾರಿಯಿದ್ದು ಈ ಅಧಿಕಾರಿ ಇಲ್ಲಿಗೆ ಬಂದಾಗಿನಿಂದ ಬಡಶಿಕ್ಷಕರಿಗೆ ಅನೇಕ ರೀತಿಯಿಂದ ತೊಂದರೆ ಕೊಡುತ್ತಿದ್ದು ಈತನ ಭ್ರಷ್ಟಾಚಾರದ ಕುರಿತು ಶಿಕ್ಷಕವರ್ಗ ಬೇಸತ್ತು ಹೋಗಿದೆ. ಈ ಅಧಿಕಾರಿ ಲಂಚದ ಪ್ರತಿಮೂರ್ತಿಯೆಂತಿದ್ದು ಲಂಚಕ್ಕಾಗಿ ಆತನದೇ ಆದ ಒಂದು ರೇಟ್‌ಬೋರ್ಡ್ ಇದೆ. ಶಾಲೆಗಳ ತಪಾಸಣೆ ಮಾಡಲು ಈತ ಹಣ ಹಾಗೂ ಹೆಂಡ ಕೇಳುತ್ತಾನೆ ಈತನ ಮಗ ಎಲ್. ಐ. ಸಿ. ಏಜೆಂಟನಿದ್ದು ಮಗನಿಗೆ ಆತನ ಉದ್ಯೋಗದಲ್ಲಿ ನೆರವಾಗುವಂತೆ ಶಿಕ್ಷಕರ ಮೇಲೆ ಒತ್ತಾಯ ತಂದು ಸುಮಾರು ೫೦ ಲಕ್ಷ ರೂಪಾಯಿಗಳ ವಿಮಾ ಪಾಲಿಸಿ ಮಾಡಿದ್ದಾನೆ. ಯಾರು ಆತನ ಮಗನ ಹತ್ತಿರ ವಿಮಾ ಪಾಲಿಸಿ ಮಾಡಿಸುವುದಿಲ್ಲವೋ ಅಂಥವರಿಗೆ ಹಿಂಸೆ ಕೊಡುತ್ತಿದ್ದಾನೆ. ತನ್ನಿಂದ ಎಲ್.ಐ.ಸಿ. ಪ್ರೀಮಿಯಂ ತೆಗೆದುಕೊಳ್ಳದ ಕಾರಣಕ್ಕಾಗಿ ಆ ಅಧಿಕಾರಿಯ ಮಗ ಬಡಶಿಕ್ಷಕರೊಬ್ಬರ ಮೇಲೆ ಬೀದಿಯಲ್ಲಿ ಗೂಂಡಾಗಿರಿ ಮಾಡಿದ. ಈ ಅಧಿಕಾರಿಯ ಭ್ರಷ್ಟಾಚಾರ ಮತ್ತು ಆತ ಶಿಕ್ಷಣ ವರ್ಗಕ್ಕೆ ಕೊಡುವ ಕಿರುಕುಳದ ವಿರುದ್ಧ ತಾಲ್ಲೂಕ್ ಪ್ರಾಥಮಿಕ ಶಿಕ್ಷಕ ಸಂಘದವರು ಮೇಲಾಧಿಕಾರಿಗಳಿಗೆ ಬರೆದಿದ್ದು ಈ ಅಧಿಕಾರಿಯ ವಿರುದ್ಧ ಕ್ರಮ ಕೈಗೊಳ್ಳಲು ಆಯುಕ್ತರಿಗೆ ತಿಳಿಸಿದ್ದಾಗಿ ಅವರು ಶಿಕ್ಷಕರ ಸಂಘಕ್ಕೆ ಬರೆದ ಉತ್ತರದಲ್ಲಿ ತಿಳಿಸಿದ್ದಾರೆ. ಈ ವಿಚಾರ ತಿಳಿದ ಮೇಲಂತೂ ಇಂಗಳಗಾಂವಿಯವರ ದಬ್ಬಾಳಿಕೆಗಳು ಮತ್ತಷ್ಟು ಹೆಚ್ಚಿವೆ. ಜಮಖಂಡಿಯಲ್ಲಿ ೪ ವರ್ಷ ಕಳೆದಿರುವ ಈ ಅಧಿಕಾರಿಯನ್ನು ಕೂಡಲೇ ಅಲ್ಲಿಂದ ವರ್ಗಾಯಿಸಬೇಕು. ಮತ್ತು ವರ್ಗಾಯಿಸುವ ಪೂರ್ವದಲ್ಲಿ ಆತ ಮಾಡಿದ ಭ್ರಷ್ಟಾಚಾರದ ಕುರಿತು ವಿಚಾರಣೆ ಮಾಡಿ ಸರಿಯಾದ ಕ್ರಮ ಕೈಗೊಳ್ಳಬೇಕೆಂದು ನಾನು ತಮ್ಮ ಮೂಲಕ ಶಿಕ್ಷಣ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಸೋಮಶೇಖರ್ —ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಮಾಡಿರುವ ಆಪಾದನೆಗಳ ಬಗ್ಗೆ ಆದಷ್ಟು ಜಾಗ್ರತೆ ವಿಚಾರಣೆ ಮಾಡಿ ಸೂಕ್ತ ಕ್ರಮ ತೆಗೆದುಕೊಂಡು ಅವರಿಗೆ ತಿಳಿಸುತ್ತೇನೆಂದು ಹೇಳುತ್ತೇನೆ.

ಶ್ರೀಯುತರುಗಳಾದ ಕೆ. ಕುಶಾಲ ಹಾಗೂ ಬಿ. ಲಕ್ಕಪ್ಪನವರು ಸಭೆಯಲ್ಲಿ ಹಾಜರಿರಲಿಲ್ಲವಾದ್ದರಿಂದ ಅವರ ನಿಯಮ ೩೫೪ರ ಕೆಳಗಿನ ಚರ್ಚೆಯನ್ನು ತೆಗೆದುಕೊಳ್ಳಲಾಗಲಿಲ್ಲ.

ಸಾಲಗಳ ಮೇಲಿನ ಬಡ್ಡಿಯನ್ನು ಮನ್ನಾ ಮಾಡುವುದು.

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).— ಅಧ್ಯಕ್ಷರೇ, ಸನ್ಮಾನ್ಯ ರಾಜ್ಯಪಾಲರು ದಯಪಾಲಿಸಿರುವ ಭಾಷಣದಲ್ಲಿ ಕರ್ನಾಟಕ ರಾಜ್ಯದ ಸಹಕಾರಿ ಸಂಘಗಳ ಮೂಲಕ ಮತ್ತು ಸಹಕಾರಿ ಬ್ಯಾಂಕಿನ ಮೂಲಕ ಪಡೆದಿರುವ ರೈತರ ಎಲ್ಲಾ ತರಹದ ಸಾಲದ ಮೇಲಿನ ಬಡ್ಡಿ ಮತ್ತು ಸುಸ್ತಿ ಬಡ್ಡಿ (ದಿನಾಂಕ ೩೦-೬-೧೯೮೮ರ ಒಳಗೆ ಕಟ್ಟುವ ರೈತರು) ಮನ್ನಾ ಮಾಡಿರುವುದಾಗಿ ತಿಳಿಸಿರುತ್ತಾರೆ. ಆದರೆ ಸಂಬಂಧಪಟ್ಟ ಸಹಕಾರಿ ಸಂಘಗಳಿಗೆ ರೈತರು ಸಾಲದ ಅಸಲು ಕಟ್ಟಲು ಹೋದಾಗ ಕೇವಲ ಚಕ್ರಬಡ್ಡಿ ಮನ್ನಾ ಮಾಡಿರುವುದಾಗಿ ಹೇಳುತ್ತಿದ್ದಾರೆ. ಆದ್ದರಿಂದ ಈ ಬಗ್ಗೆ ಸ್ಪಷ್ಟ ಸರ್ಕಾರಿ ಆಜ್ಞೆ ಹೋಗಿದೆಯೆ? ಇದೇ ಸೌಲಭ್ಯವನ್ನು ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದ ರೈತರ ಸಾಲಕ್ಕೂ ಅನ್ವಯಿಸುವ ಬಗ್ಗೆ ಸರ್ಕಾರ ಏನಾದರೂ ಯೋಚಿಸಿದೆಯೇ ಎಂಬ ಬಗ್ಗೆ ಸರ್ಕಾರದ ಹೇಳಿಕೆ ತಿಳಿಯಬಯಸುತ್ತೇನೆ.

ಶ್ರೀ ಎಚ್. ಏಕಾಂತಯ್ಯ.—ಸಾಲಗಳ ಮೇಲಿನ ಬಡ್ಡಿಯನ್ನು ಮನ್ನಾ ಮಾಡುವ ವಿಚಾರದಲ್ಲಿ ಸರ್ಕಾರದ ನೀತಿಯನ್ನೂ ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಸಂಕ್ಷಿಪ್ತವಾಗಿ ಪ್ರಸ್ತಾಪಿಸಿದ್ದಾರೆ. ಈ ಬಗ್ಗೆ ಸ್ಪಷ್ಟವಾದ ಸೂಚನೆಗಳನ್ನು ಕೂಡಿದ ಆದೇಶವನ್ನು ಸರ್ಕಾರ ತೀವ್ರವಾಗಿ ಹೊರಡಿಸಲಂ ಪರಿಶೀಲಿಸುತ್ತಿದೆ.

ರಾಜಾಜೀನಗರದಲ್ಲಿ ಕಳೆದ ಮೂರು ದಿನಗಳಿಂದ ಕುಡಿಯುವ ನೀರು ಸರಬರಾಜು ನಿಂತಿರುವುದು.

ಶ್ರೀ ಎಂ. ಎಸ್. ಕೃಷ್ಣನ್.—ಬೆಂಗಳೂರು ನಗರದ ರಾಜಾಜಿನಗರದಲ್ಲಿ ಕಳೆದ ಮೂರು ದಿನಗಳಿಂದ ಕುಡಿಯಲು ನೀರಿಲ್ಲದಂತಾಗಿದೆ. ತಿಪ್ಪಗೊಂಡನಹಳ್ಳಿ ಜಲಾಶಯದಲ್ಲಿ ಪಂಪ್ ಕೆಟ್ಟಿದೆ ಎಂದು ಹೇಳಲಾಗಿದೆ ಆದರೆ ಜನರಿಗೆ ಬೇರೆ ವ್ಯವಸ್ಥೆ (ಟ್ಯಾಂಕರ್ ಇತ್ಯಾದಿ) ಮಾಡದೆ ಅಲ್ಲಿ ಹಾಹಾಕಾರ ವಾಗಿದೆ. ಇದರ ಬಗ್ಗೆ ನಗರಾಭಿವೃದ್ಧಿ ಸಚಿವರ ಹೇಳಿಕೆ ಅಗತ್ಯ.

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).— ತಿಪ್ಪಗೊಂಡನಹಳ್ಳಿಯಲ್ಲಿ ರಿಪೇರಿ ಕೆಲಸ ಆಗಿದೆ. ನಿನ್ನೆ ಆದು ಮುಗಿದಿದೆ. ಆದರೆ ಇನ್ನೂ ನೀರಿನ ವ್ಯವಸ್ಥೆ ಬೆಂಗಳೂರಿನಲ್ಲಿ ಸರಿಯಾಗಿ ನಡೆದಿಲ್ಲ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಎಲ್ಲಿ ನೀರು ಇನ್ನೂ ಸರಿಯಾಗಿ ವಿತರಣೆ ಆಗುತ್ತಾ ಇಲ್ಲ ಅಲ್ಲಿ ಟ್ಯಾಂಕರು ಮೂಲಕ ನೀರನ್ನು ಒದಗಿಸಂವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಗಮನ ಸೆಳೆಯುವ ಸೂಚನೆ

ಪರಿಶಿಷ್ಟ ಜಾತಿ ಮತ್ತು ವರ್ಗದ ಸರ್ಕಾರಿ ಆಜ್ಞೆಯು ರೀತ್ಯಾ ಸ್ನಾತಕೋತ್ತರ ಪದವಿಗೆ ಪ್ರವೇಶ ಪಡೆಯುವಲ್ಲಿ ತೊಂದರೆಯಾಗಿರುವ ಬಗ್ಗೆ.

ಶ್ರೀ ಎಚ್. ಕೆ. ಕುಮಾರಸ್ವಾಮಿ (ಬೇಲೂರು).—ಮಾನ್ಯ ಅಧ್ಯಕ್ಷರೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವೈದ್ಯರುಗಳಿಗೆ ಇತ್ತೀಚಿನ ಸರ್ಕಾರಿ ಆಜ್ಞೆಯ ರೀತ್ಯಾ ಸ್ನಾತಕೋತ್ತರ ಪದವಿಗೆ ಪ್ರವೇಶ ಪಡೆಯುವಲ್ಲಿ ತೊಂದರೆಯಾಗಿರುವ ವಿಷಯದ ಬಗ್ಗೆ ಆರೋಗ್ಯ ಮಂತ್ರಿಯವರ ಗಮನ ವನ್ನು ಸೆಳೆಯಂತ್ತೇನೆ.

ಶ್ರೀ ಬಿ. ರಾಚಯ್ಯ (ಆರೋಗ್ಯ ಸಚಿವರು).— ಮಾನ್ಯ ಅಧ್ಯಕ್ಷರೆ, ಈ ವರ್ಗದವರಿಗೆ ಸ್ನಾತಕೋತ್ತರ ಪದವಿಗಳಿಗೆ ಹೋಗತಕ್ಕ ವೈದ್ಯರುಗಳಿಗೆ ನಾವು ಒಂದು ಪ್ರವೇಶ ಪರೀಕ್ಷೆಯನ್ನು ಇಟ್ಟು ಆದರಲ್ಲಿ ಉತ್ತೀರ್ಣರಾಗತಕ್ಕವರಿಗೆ ೧೫ ಪರ್ಸೆಂಟ್ ಪೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಮತ್ತು ೩ ಪರ್ಸೆಂಟ್ ಪೆಡ್ಯೂಲ್ಡ್ ಟ್ರೈಬ್ಸ್‌ನವರಿಗೆ ಕೊಡಬೇಕೆಂದು ನಿಗದಿ ಮಾಡಿದ್ದೆವು. ಆದರ ಪ್ರಕಾರ ಅವರು ಸಾಕಷ್ಟು ಸಂಖ್ಯೆಯಲ್ಲಿ ಅಭ್ಯರ್ಥಿಗಳು ಬರಲಿಲ್ಲ ಆದ್ದರಿಂದ ಆ ಸ್ಥಾನ ಏನು ಖಾಲಿ ಬಿದ್ದಿತ್ತು ಅದನ್ನು ಸರ್ವೀಸ್‌ನಲ್ಲಿರತಕ್ಕ ವೈದ್ಯರ ಹೆಸರು ತೆಗೆದುಕೊಂಡು ಭರ್ತಿ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತಿದೆ. ಎರಡನೆಯದಾಗಿ, ಸರ್ಕಾರಿ ವೈದ್ಯರುಗಳಲ್ಲಿ ಕೆಲವು ಹಂಗಾಮಿಯಾಗಿ ಕೆಲಸ ಮಾಡಿರತಕ್ಕ ವೈದ್ಯರುಗಳನ್ನು ಅಂದರೆ ಐದಾರು, ಏಳೆಂಟು ವರ್ಷಗಳ ಕಾಲ ಸೇವೆ ಸಲ್ಲಿಸಿದವರನ್ನು ಸರ್ಕಾರ ಖಾಯಂ ಮಾಡಿದೆ. ಹೀಗೆ ಖಾಯಂ ಮಾಡಿದ್ದರೂ ಎರಡು ವರ್ಷ ಪೂರ್ವಾವಧಿ ಸೇವೆ (ಪ್ರೊಬೇಷನರ್) ಮಾಡಬೇಕೆಂಬ ಕಡ್ಡಾಯ ನಿಯಮ ಇರುವುದರಿಂದ ಅವರನ್ನು ಕೂಡ ಸೆಲೆಕ್ಟ್ ಮಾಡುವುದು ಕಷ್ಟವಾಗಿದೆ. ಆದ್ದರಿಂದ ಎರಡರ ವರ್ಷದ ನಿಯಮ ಏನಿದೆ ಅದನ್ನು ರಿಲ್ಯಾಕ್ಸ್ ಮಾಡುವುದಕ್ಕೋಸ್ಕರ ಡಿ.ಪಿ.ಎ.ಆರ್ ಗೆ ಕಳುಹಿಸಿಕೊಟ್ಟಿದ್ದೇವೆ. ಇದನ್ನು ಅತ್ಯಂತ ಸಹಾನುಭೂತಿ ಯಿಂದ ಪರಿಶೀಲಿಸಬೇಕೆಂದು ವಿಚಾರ ಮಾಡಿದ್ದೇವೆ. ಆದ್ದರಿಂದ ಈ ಬಗ್ಗೆ ಅಂತಿಮ ತೀರ್ಮಾನ ತೆಗೆದುಕೊಳ್ಳಲು ಇನ್ನು ಒಂದೆರಡು ದಿವಸ ಆಗಬಹುದು. ಆ ದೃಷ್ಟಿಯಿಂದ ೧೫-೧೮ ಪರ್ಸೆಂಟ್ ಏನಿದೆ ಅದಕ್ಕೆ ಕಡಿಮೆ ಇಲ್ಲದ ರೀತಿ ಯಲ್ಲಿ ಇವರಿಗೆ ಬಡ್ತಿ ಕೊಡುವುದಕ್ಕೆ ಅವಕಾಶ ಮಾಡಿಕೊಡುತ್ತೇವೆಂದು ಸರ್ಕಾರದ ಪರವಾಗಿ ಉತ್ತರಿಸುತ್ತೇನೆ.